ಏಕದಿನ ಕ್ರಿಕೆಟ್ ವಿಶ್ವಕಪ್ ಪಂದ್ಯಾವಳಿಗಳ ಸಂದರ್ಭದಲ್ಲಿ ವಿವಿಧ ದೇಶಗಳು ಹೊರತಂದಿರುವ ಅಂಚೆಚೀಟಿಗಳಿಗೂ ಪುಟ್ಟ ಇತಿಹಾಸವಿದೆ.

■ ನಾಗೇಶ್ ಶೆಣೈ




ಬಾರ್ಬಾಡೋಸ್ ಹೊರತಂದ ಅಂಚೆಚೀಟಿಗಳು




2015ರ ವಿಶ್ವಕಪ್ ಸಂದರ್ಭ ನ್ಯೂಜಿಲೆಂಡ್ ಅಂಚೆ ಇಲಾಖೆ ಪರಿಚಯಿಸಿದ ಮಿನಿಯೇಚರ್ ಶೀಟ್

# ವಿಶ್ವಕಪ್ ಕ್ರಿಕೆಟ್‌ಗೆ ಅಂಚೆಚೀಟಿ ಮೊಹರು







ಆ್ಯಂಟೀಗಾದ ವಿಶ್ವಕಪ್ ಅಂಚೆಚೀಟಿಗಳು

ಭಾರತ– ಪಾಕಿಸ್ತಾನ ಹಾಗೂ ಶ್ರೀಲಂಕಾ 1996ರಲ್ಲಿ ಏಷ್ಯಾ ಉಪಖಂಡದಲ್ಲಿ ನಡೆದ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಜಂಟಿ ಆತಿಥ್ಯ ವಹಿಸಿದ್ದವು. ಆ ವರ್ಷದ ಮಾರ್ಚ್‌ನಲ್ಲಿ 'ಭಾರತೀಯ ಅಂಚೆ ಇಲಾಖೆ' ದೇಶದ ನಾಲ್ವರು ದಿಗ್ಗಜ ಆಟಗಾರರ ಅಂಚೆಚೀಟಿಗಳನ್ನು ಬಿಡುಗಡೆ ಮಾಡಿತ್ತು. ಅಂಚೆಚೀಟಿ ಗೌರವಕ್ಕೆ ಪಾತ್ರರಾದ ಆಟಗಾರರು: ಸಿ.ಕೆ. ನಾಯ್ಡು (ಭಾರತ ಟೆಸ್ಟ್ ತಂಡದ ಮೊದಲ ನಾಯಕ), ಡಿ.ಬಿ. ದೇವಧರ್, ವಿನೂ ಮಂಕಡ್ ಮತ್ತು ವಿಜಯ್ ಮರ್ಚೆಂಟ್. ಭಾರತ 2011ರಲ್ಲಿ ಪೂರ್ಣಪ್ರಮಾಣದಲ್ಲಿ ವಿಶ್ವಕಪ್ ಆತಿಥ್ಯ ವಹಿಸಿದರೂ ಅದರ ನೆನಪಿನಲ್ಲಿ ಸ್ಟ್ಯಾಂಪ್‌ಗಳನ್ನು ಬಿಡುಗಡೆ ಮಾಡಲಿಲ್ಲ.

ವಿಶ್ವಕಪ್‌ಗೆ ಸಂಬಂಧಿಸಿದಂತೆ, ಕ್ರಿಕೆಟ್ ಆಡುವ ದೇಶಗಳು ಅನೇಕ ಅಂಚೆಚೀಟಿಗಳನ್ನು ಬಿಡುಗಡೆ ಮಾಡಿವೆ. ಆ ಬಗ್ಗೆ ಇಲ್ಲಿದೆ ಒಂದು ಸ್ಥೂಲ ನೋಟ.

1975ರ ಮೊದಲ ವಿಶ್ವಕಪ್‌ನಲ್ಲಿ ವೆಸ್ಟ್ ಇಂಡೀಸ್ ತಂಡ 'ಪ್ರುಡೆನ್ಶಿಯಲ್ ಟ್ರೋಫಿ' ಗೆದ್ದುಕೊಂಡಾಗ, ಕೆರೀಬಿಯನ್ ದ್ವೀಪ ರಾಷ್ಟ್ರಗಳು (ಸೇಂಟ್ ವಿನ್ಸೆಂಟ್, ಬಾರ್ಬಾಡೋಸ್, ಬೆಲಿಝ್, ಟ್ರಿನಿಡಾಡ್ ಅಂಡ್ ಟೊಬ್ಯಾಗೊ) ಅದರ ಸಂಭ್ರಮದಲ್ಲಿ ಎರಡು ಅಂಚೆಚೀಟಿಗಳನ್ನು ಬಿಡುಗಡೆ ಮಾಡಿದವು. ಅದು 1976ರ ಅಕ್ಟೋಬರ್‌ನಲ್ಲಿ. 45 ಸೆಂಟ್ ಮುಖಬೆಲೆಯ ಅಂಚೆಚೀಟಿಯು ಪ್ರುಡೆನ್ಶಿಯಲ್ ಟ್ರೋಫಿಯ ಚಿತ್ರ ಹೊಂದಿತ್ತು. ಇನ್ನೊಂದು ಅಂಚೆಚೀಟಿಯಲ್ಲಿ ಬ್ಯಾಟ್–ಚೆಂಡಿನ ಹಿನ್ನೆಲೆಯಲ್ಲಿ ಕೆರೀಬಿಯನ್ ದ್ವೀಪಗಳಿದ್ದವು.

ಎರಡು ತಿಂಗಳ ಬಳಿಕ, ಆ್ಯಂಟೀಗಾ ದ್ವೀಪವು ಮೂರು ಅಂಚೆಚೀಟಿಗಳನ್ನು ಹೊರತಂದಿತ್ತು. ಒಂದರಲ್ಲಿ ಎಡಮೂಲೆಯಲ್ಲಿ ಟ್ರೋಫಿ ಮತ್ತು ವೇಗದ ಬೌಲರ್ ಆ್ಯಂಡಿ ರಾಬರ್ಟ್ಸ್ ಬೌಲ್ ಮಾಡುತ್ತಿರುವ ಚಿತ್ರ ಇತ್ತು. ಇನ್ನೊಂದರಲ್ಲಿ ಟ್ರೋಫಿ ಮತ್ತು ವಿವಿಯನ್ ರಿಚರ್ಡ್ಸ್ ಬ್ಯಾಟಿಂಗ್ ಮಾಡುತ್ತಿರುವ ಚಿತ್ರವಿತ್ತು. ಮತ್ತೊಂದು ಸ್ಟ್ಯಾಂಪ್‌ನಲ್ಲಿ ವಿಜೇತ ವೆಸ್ಟ್ ಇಂಡೀಸ್ ತಂಡದ ಆಟಗಾರರಿದ್ದರು.

1992ರಲ್ಲಿ ಇಮ್ರಾನ್ ಖಾನ್ ಅವರ ಸ್ಫೂರ್ತಿಯುತ ನಾಯಕತ್ವದಲ್ಲಿ ಪಾಕಿಸ್ತಾನ ತಂಡ, ಆಸ್ಟ್ರೇಲಿಯಾ–ನ್ಯೂಜಿಲೆಂಡ್‌ನಲ್ಲಿ ನಡೆದ ಐದನೇ (ಬೆನ್ಸನ್ ಆ್ಯಂಡ್ ಹೆಜಸ್) ವಿಶ್ವಕಪ್‌ನಲ್ಲಿ ಚಾಂಪಿಯನ್ ಆಗಿದ್ದು ಇತಿಹಾಸ. ಇದರ ಸಂಭ್ರಮದಲ್ಲಿ ಆ ದೇಶ 2 ರೂಪಾಯಿ, 5 ರೂಪಾಯಿ ಮತ್ತು 7ರೂಪಾಯಿ ಮುಖಬೆಲೆಯ ಅಂಚೆಚೀಟಿಗಳನ್ನು ಹೊರತಂದಿತು. ಒಂದರಲ್ಲಿ ಇಮ್ರಾನ್ ಖಾನ್ ಚಿತ್ರ, ಮತ್ತೊಂದರಲ್ಲಿ ಕ್ರಿಕೆಟ್ ಚೆಂಡು, ಪಾಕ್ ಧ್ವಜ, ವಿಶ್ವಕಪ್ ಚಿತ್ರವಿತ್ತು. ಮೂರನೇ ಸ್ಟ್ಯಾಂಪಿನಲ್ಲಿ ಭಾಗವಹಿಸಿದ ರಾಷ್ಟ್ರಗಳ ಧ್ವಜಗಳಿದ್ದವು.




ಅಂಚೆಚೀಟಿಯಲ್ಲಿ ವಿವ್ ರಿಚರ್ಡ್ಸ್




ಪಾಕಿಸ್ತಾನ 1992ರಲ್ಲಿ ಚಾಂಪಿಯನ್ ಆದಾಗ ಅದರ ನೆನಪಿನಲ್ಲಿ ಬಿಡುಗಡೆ ಮಾಡಿದ ಅಂಚೆಚೀಟಿಗಳು

## ತ್ರಿಕೋನ ಆಕಾರದ ಸ್ಟ್ಯಾಂಪ್!

1996ರ ವಿಲ್ಸ್ ವಿಶ್ವಕಪ್‌ನಲ್ಲಿ ಅರ್ಜುನ ರಣತುಂಗ ನಾಯಕತ್ವದ ಶ್ರೀಲಂಕಾ, ಆಸ್ಟ್ರೇಲಿಯಾವನ್ನು ಮಣಿಸಿ ಚಾಂಪಿಯನ್ ಆಗಿತ್ತು. ಅದರ ನೆನಪಿನಲ್ಲಿ ಆ ದೇಶವು, ಅದೇ ವರ್ಷದ ಆಗಸ್ಟ್ 18ರಂದು ತ್ರಿಕೋನ ಆಕಾರದ ನಾಲ್ಕು ಅಂಚೆಚೀಟಿಗಳಿರುವ ಮಿನಿಯೇಚರ್ ಶೀಟ್ ಬಿಡುಗಡೆ ಮಾಡಿತು.

ಅಷ್ಟರಲ್ಲಿ ಬಾಂಗ್ಲಾದೇಶದಲ್ಲೂ ಕ್ರಿಕೆಟ್ ಜನಪ್ರಿಯಗೊಂಡು ಆ ದೇಶ ಕೂಡ ಅದೇ